**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/129/ಇಎಸ್‌ಟಿ(7)2015 / 3477

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ: 29.01.2016.

**ನೆನಪೋಲೆ**

ಅತೀ ತುರ್ತು

**ವಿಷಯ:** ಕರ್ನಾಟಕ ರಾಜ್ಯ ಹಿಂದುಳಿದ ಆಯೋಗದಿಂದ ಕೈಗೊಳ್ಳಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದ ವರದಿಯನ್ನು ಸಿದ್ದಪಡಿಸಲು ದ್ವಿತೀಯ ಮೂಲದ (Secondary Source Of Data) ಮಾಹಿತಿಯನ್ನು ಕಳುಹಿಸಿಕೊಡುವ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ಸಮ ಸಂಖ್ಯೆಯ ಹಿಂಬರಹ ದಿನಾಂಕ: 07.11.2015.

# # # # #

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಛೇರಿಯ ಉಲ್ಲೇಖಿತ ಹಿಂಬರಹ ದಿನಾಂಕ: 07.11.2015ರ ಮೂಲಕ ನಿಗದಿತ ನಮೂನೆ-1 ಮತ್ತು ನಮೂನೆ-2ರಲ್ಲಿ Excel sheet ನಲ್ಲಿ ತುರ್ತಾಗಿ ಕಳುಹಿಸಲು ತಿಳಿಸಲಾಗಿತ್ತು. ಆದರೆ, ಕೆಲವೊಂದು ಸಂಸ್ಥೆಗಳಿಂದ ಮಾತ್ರ Excel sheet ನಲ್ಲಿ ಮಾಹಿತಿಯನ್ನು ಕಳುಹಿಸಲಾಗಿದ್ದು ಹಲವಾರು ಸಂಸ್ಥೆಗಳಿಂದ ಮಾಹಿತಿಯನ್ನು ಕಳುಹಿಸಿರುವುದಿಲ್ಲ. ಕೆಲವು ಸಂಸ್ಥೆಯವರು Excel sheet ನ ಬದಲಾಗಿ Scan ಮಾಡಿ jpg. Format ನಲ್ಲಿ ಮಾಹಿತಿಯನ್ನು ಕಳುಹಿಸಲಾಗಿದೆ. ಇದರಿಂದಾಗಿ ಕ್ರೋಢೀಕರಿಸಿದ ಮಾಹಿತಿಯನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಕಳುಹಿಸಲು ತುಂಬಾ ಅಡಚಣೆಯಾಗಿದ್ದು, ನಿಗದಿತ ಸಮಯಕ್ಕೆ ಮಾಹಿತಿಯನ್ನು ಕಳುಹಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ವಿಳಂಬಕ್ಕೆ ಆಸ್ಪದ ನೀಡದೆ ನಮೂನೆ-1 ಮತ್ತು ನಮೂನೆ-2 ರಲ್ಲಿ ಮಾಹಿತಿಯನ್ನು ಇ-ಮೇಲ್ (est7dte@gmail.com) ಮೂಲಕ ಕಡ್ಡಾಯವಾಗಿ Excel sheet ನಲ್ಲೇ ಈ ದಿನವೇ ಕಳುಹಿಸಲು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ,

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳ / ಪಾಲಿಟೆಕ್ನಿಕ್‌ಗಳ / ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ - ವೆಬ್‌ಸೈಟ್ ಮೂಲಕ.

ಪ್ರತಿ:
1. ಉಪ ನಿರ್ದೇಶಕರು (ಸಾಂಖ್ಯಿಕ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ಘಟಕಕ್ಕೆ.